ಓಂ ಶಾಂತಿ, ಬಾಪ್ ದಾದಾ, ಅವ್ಯಕ್ತ ಮುರಳಿ 19-07-1971

***<u>ಸಿಂಪಲ್(ಸರಳವಾಗಿ), ಸ್ಯಾಂಪಲ್(ಮಾದರಿಯಾಗಿ)</u>*** (सिम्पल बनो, सैम्पल बनो)

ಇಂದಿನ ಈ ಸಂಘಟನೆ ಎಂತಹ ಸಂಘಟನೆಯಾಗಿದೆ? ಕರ್ಮದ ಪ್ರಮಾಣ ಸಂಘಟನೆಯನ್ನು ಏನೆಂದು ಕರೆಯುವುದು? ಕರ್ತವ್ಯದ ಆಧಾರದ ಮೇಲೆ ಹೆಸರು ಹೇಳಿ? (ಪ್ರತಿಯೊಬ್ಬರೂ ಹೇಳಿದರು), ಯಾವೆಲ್ಲಾ ಹೆಸರುಗಳನ್ನೂ ಹೇಳಿದಿರೋ ಅವು ಪ್ರ್ಯಾಕ್ಟಿಕಲ್ ತಮ್ಮ ಕರ್ತವ್ಯವೆಂದು ತಿಳಿದು ಹೇಳಿದಿರಾ? ಪ್ರತ್ಯಕ್ಷವಾಗಿ ಆ ವಿದವಾಗಿ ನಡೆಯುತ್ತಿದ್ದರೆ ಏನಾದಿರಿ? ಸುಪುತ್ರ ಮತ್ತು ಪ್ರಮಾಣ ಮೂರ್ತಿಗಳು. ಅಭ್ಯಾಸ ಮಾಡುವವರಾಗಿದ್ದರೆ ಪ್ರಮಾಣ ಮೂರ್ತಿಯೆಂದು ಹೇಳುವುದಿಲ್ಲ. ಪ್ರತ್ಯಕ್ಷವಾಗಿ ಇರುವುದಾದರೆ ಸುಪುತ್ರ ಮತ್ತು ಪ್ರಮಾಣ ಮೂರ್ತಿ ಎರಡೂ ಆಗಿದ್ದೀರಿ. ಈ ಗುಂಪು ಸರಳ ಮತ್ತು ಮಾದರಿಯಾಗಿದ್ದಾರೆ. ಸರಳವಾಗಿದ್ದು ಮಾದರಿಯಾಗಿ ತೋರಿಸುವವರು. ಕೇವಲ ವಸ್ತ್ರಗಳಲ್ಲಿ ಅಲ್ಲ. ಆದರೆ ಎಲ್ಲಾ ಮಾತುಗಳಲ್ಲಿ ಸರಳವಾಗಿದ್ದು ಮಾದರಿ ಆಗುವವರು. ಹೇಗೆ ಯಾವುದಾದರೂ ಸರಳ ಮತ್ತು ಸ್ವಚ್ಛವಾದ ವಸ್ತು ಎಲ್ಲರನ್ನು ತನ್ನಡೆಗೆ ಆಕರ್ಷಣೆ ಮಾಡಿಕೊಳ್ಳುತ್ತದೆ. ಅದೇ ರೀತಿ ಮನಸ್ಸಿನಲ್ಲಿರುವ ಸಂಕಲ್ಪ, ಸಂಬಂಧ, ವ್ಯವಹಾರದಲ್ಲಿ ಮತ್ತು ನಡೆ-ನುಡಿಗಳಲ್ಲಿ ಸರಳ ಮತ್ತು ಸ್ವಚ್ಛವಾಗಿರುವವರು ಮಾದರಿಯಾಗಿ ತಮ್ಮೆಡೆಗೆ ಆಕರ್ಷಣೆ ಮಾಡುತ್ತಾರೆ. ಸಂಕಲ್ಪದಲ್ಲಿ ಅಥವಾ ಸಂಬಂಧದಲ್ಲಿ ಸರಳವಾಗಿಲ್ಲದಿದ್ದರೆ ಅದಕ್ಕೆ ಬದಲಾಗಿ ಸಾಧಾರಣತೆಯಲ್ಲಿ ಮಹಾನತೆಯಿರಲಿ, ಆಗ ಏನಾಗುವಿರಿ? ತಂದೆ ಹೇಗೆ ಸಾಕಾರ ಸೃಷ್ಟಿಯಲ್ಲಿ ಸರಳವಾಗಿರುತ್ತಾ ತಮ್ಮೆಲ್ಲರಿಗೆ ಮಾದರಿಯಾಗಿದ್ದರಲ್ಲವೇ? ಅತೀ ಸಾಧಾರಣತೆಯೇ ಅತೀ ಮಹಾನತೆಯನ್ನು ಪ್ರಸಿದ್ಧ ಮಾಡುತ್ತದೆ. ಆದ್ದರಿಂದ ಸಾಧಾರಣತೆ ಇಲ್ಲದಿದ್ದರೆ ಸಮಸ್ಯೆಯಾಗುತ್ತೀರಿ. ಸಂಕಲ್ಪಗಳ ಸಮಸ್ಯೆಯಲ್ಲಿರುತ್ತಾರೆ. ನಡೆ-ನುಡಿಯೂ ಸರಳವಾಗಿರದ ಕಾರಣ ಬೇರೆಯವರಿಗೆ ಅಥವಾ ತಮಗೆ ಯಾವುದಾದರೊಂದು ಸಮಸ್ಯೆಯಾಗುತ್ತೀರಿ. ಹಾಗಾದರೆ ಸಮಸ್ಯೆಯಾಗಬೇಕೋ ಅಥವಾ ಸರಳವಾಗಬೇಕೋ? ಸಮಸ್ಯೆಯವರು ಸರಳವಾಗಲಾರರು. ಆದ್ದರಿಂದ ಮನಸ್ಸಿನಲ್ಲಿಯೂ ಸರಳ, ಮನಸ್ಸಿನಲ್ಲಿ ಯಾವುದೇ ಸಮಸ್ಯೆಯಿದ್ದರೆ ಅವರನ್ನು ಸರಳ ಎಂದು ಕರೆಯಲಾಗುತ್ತದೆಯೇ? ಗಾಂಧಿಯನ್ನು ಸರಳ ಎಂದು ಹೇಳುತ್ತಾರೆ, ಆದರೆ ಸರಳವಾಗಿದ್ದು ಒಂದು ಮಾದರಿಯಾಗಿ ತೋರಿಸಿದರಲ್ಲವೇ? ಅವರ ಸರಳ ಕಾರ್ಯವೇ ಮಹಾನತೆಯ ನಿಶಾನಿಯಾಗಿತ್ತು. ಅದು ಹದ್ದಿನ ಕಾರ್ಯವಾಯಿತು. ಆದರೆ ಇಲ್ಲಿ ಬೇಹದ್ದಿನ ತಂದೆಯ ಮಕ್ಕಳಾಗಿ ಬೇಹದ್ದಿನ ಕಾರ್ಯ ಮಾಡಬೇಕು. ನೀವು ವಿಶ್ವಕ್ಕೆ ನಿಮಿತ್ತರಾಗಿರುವಿರಲ್ಲವೇ? ವಿಶ್ವ ಹೇಗೆ ಬೇಹದ್ದಿನವಿದೆಯೋ, ಹೇಗೆ ತಂದೆ ಬೇಹದ್ದಿನವರೋ, ಹಾಗೆಯ ಯಾವುದೇ ಕಾರ್ಯವನ್ನು ಮಾಡಿದರೂ ಬೇಹದ್ದಿನ ಸ್ಥಿತಿಯಲ್ಲಿ ಸ್ಥಿತರಾಗಿ ಕಾರ್ಯವನ್ನು ಮಾಡಬೇಕು. ಆ ಕಾರ್ಯವೇ ತನ್ನೆಡೆಗೆ ಆಕರ್ಷಣೆ ಮಾಡುತ್ತದೆ. ಆದ್ದರಿಂದ ಆಕರ್ಷಣಾ ಮೂರ್ತಿಯಾಗಲು ಏನು ಮಾಡಬೇಕು? ಸರಳವಾಗಿರಬೇಕು. ಆಕರ್ಷಣಾ ಮೂರ್ತಿಯಾಗಲು ದೈವಿ ಸಂಬಂಧದಲ್ಲಿಯೂ ಸರಳವಾಗಿಲ್ಲದಿದ್ದರೆ ಸಮಸ್ಯೆಯಾಗುತ್ತದೆ. ಆಗ ಫಲಿತಾಂಶವೇನಾಗುತ್ತದೆ? ಸ್ನೇಹ ಮತ್ತು ಸಹಯೋಗದಿಂದ ವಂಚಿತರಾಗುತ್ತಾರೆ. ಯಾರು ಸಾಧಾರಣ, ಸರಳವಾಗಿರುತ್ತಾರೋ ಅವರ ಕಡೆಗೆ ಇಚ್ಛೆಯಿಲ್ಲದಿದ್ದರೂ ಎಲ್ಲರಿಗೂ ಸ್ನೇಹ ಮತ್ತು ಸಹಯೋಗ ಕೊಡುವ ಶುಭ ಭಾವನೆಯಿರುವುದು. ಆದ್ದರಿಂದ ಸರ್ವಸ್ನೇಹಿ ಅಥವಾ ಸರ್ವರ ಸಹಯೋಗ ಪ್ರಾಪ್ತಿ ಮಾಡಿಕೊಳ್ಳಲು ಅಥವಾ ಸರ್ವರ ಸಹಯೋಗಿಯಾಗಲು ಸರಳವಾಗುವುದು ಬಹಳ ಅವಶ್ಯಕ. ಯಾವುದೇ ಸಮಸ್ಯೆಯಿಲ್ಲ ತಾನೆ? ಸ್ವಯಂ ಕೂಡಾ ಸಮಸ್ಯೆಯಾಗಿಲ್ಲ ತಾನೆ? ಲೌಕಿಕ ಪರಿವಾರದಲ್ಲಿ ಅಥವಾ ವ್ಯವಹಾರದಲ್ಲಿ, ದೈವಿ ಪರಿವಾರದಲ್ಲಿ – ಎಂದಿಗೂ ತಮ್ಮಲ್ಲಿ ಸಮಸ್ಯೆ ಇರಬಾರದು. ಬೇರೆಯವರಿಗೂ ನೀವು ಸಮಸ್ಯೆಯಾಗಬಾರದು. ಸಮಸ್ಯೆಯಾದರೆ ಸೇವೆ ತೆಗೆದುಕೊಳ್ಳುವವರು ಆಗುವಿರಿ. ತಾವು ಈಶ್ವರೀಯ ಸೇವಾಧಾರಿ, ಸೇವಾಧಾರಿ ಎಂದರೆ ಸೇವೆ ಮಾಡುವವರು ಸೇವೆ ತೆಗೆದುಕೊಳ್ಳುವವರಲ್ಲ. ಸೇವೆ ತೆಗೆದುಕೊಳ್ಳುವವರಾದರೆ ಹೆಸರಿಗೆ ತಕ್ಕಂತೆ ಕರ್ತವ್ಯವಾಗಲಿಲ್ಲ. ಪರಮಾತ್ಮನ ಸಹಯೋಗಿಗಳು ಸೇವೆ ತೆಗೆದುಕೊಳ್ಳುವುದಿಲ್ಲ, ಕೊಡುತ್ತಾರೆ. ಏಕೆಂದರೆ ದಾತಾನ ಮಕ್ಕಳಾಗಿದ್ದೀರಿ. ತಂದೆ ಏನಾದರೂ ತೆಗೆದುಕೊಳ್ಳುತ್ತಾರೆಯೇ? ದಾತಾ ಆಗಿದ್ದೀರಿ.

ಸಮಸ್ಯೆಯಾಗುವ ಕಾರಣ ಸೇವೆ ತೆಗೆದುಕೊಳ್ಳುತ್ತಿದ್ದರೆ ದಾತಾನ ಮಕ್ಕಳು ಹೇಗೆ ಆಗುವಿರಿ? ಯಾವುದೇ ಪ್ರಕಾರದ ಸೇವೆಯನ್ನು ತೆಗೆದುಕೊಂಡರೆ, ನಾವು ದಾತಾ ಅಥವಾ ವರದಾತಾನ ಮಕ್ಕಳು ಎಂಬ ನಶೆ ಎಂದಿಗೂ ಇರುವುದಿಲ್ಲ. ಒಳ್ಳೆಯದು.

ಇದು ಪ್ರವೃತ್ತಿಯವರ ಗುಂಪೋ ಅಥವಾ ನಿವೃತ್ತಿಯವರ ಗುಂಪೋ? ಲೌಕಿಕ ಪ್ರವೃತ್ತಿ ಸಮಾಪ್ತಿಯಾಯಿತಲ್ಲವೇ? ಲೌಕಿಕ ಪ್ರವೃತ್ತಿಯನ್ನೂ ಸಹ ಈಶ್ವರೀಯ ಪ್ರವೃತ್ತಿಯಲ್ಲಿ ಪರಿವರ್ತನೆ ಮಾಡಿರುವಿರಾ? ಎಲ್ಲಿಯವರೆಗೆ ಪರಿವರ್ತನೆ ಮಾಡುವುದಿಲ್ಲವೋ ಅಲ್ಲಿಯವರೆಗೆ ಅಲೌಕಿಕ ಸ್ಥಿತಿಯಲ್ಲಿ ಏಕರಸವಾಗಿರುವುದಿಲ್ಲ. ಯಾವುದರಿಂದ ತಮ್ಮ ಲೌಕಿಕ ಪ್ರವೃತ್ತಿ ಪರಿವರ್ತನೆಯಾಗುವುದೋ ಆ ಹೆಸರು, ರೂಪ, ಗುಣ ಮತ್ತು ಕರ್ತವ್ಯಗಳನ್ನು ಸದಾ ನೆನಪಿಟ್ಟುಕೊಂಡು ನಂತರ ಪ್ರವೃತ್ತಿಯಲ್ಲಿರಿ ಎಂದು ಹೇಳಲಾಗಿತ್ತು. ಸದಾ ತಮ್ಮನ್ನು ಸೇವಾಧಾರಿ ಎಂದು ತಿಳಿಯುವುದರಿಂದ ದರ್ಪ ಬರುವುದಿಲ್ಲ. **ಸೇವಾಧಾರಿ ಸದಾ ನಮ್ರಚಿತ್ರ, ನಿರ್ಮಾಣರಾಗಿರುತ್ತಾರೆ ಮತ್ತು ತಮ್ಮ ಮನೆಯನ್ನು ಸಹ ಮನೆಯೆಂದು ತಿಳಿಯದೇ ಸೇವಾಸ್ಥಾನ ಎಂದು ತಿಳಿಯುತ್ತಾರೆ. ತ್ಯಾಗ ಸೇವಾಧಾರಿಯ ಮುಖ್ಯ ಗುಣವಾಗಿದೆ. ತ್ಯಾಗವಿಲ್ಲದಿದ್ದರೆ ಸೇವೆಯೂ ಆಗುವುದಿಲ್ಲ. ತ್ಯಾಗದಿಂದ ತಪಸ್ವಿ ಮೂರ್ತಿ ಆಗುತ್ತೀರಿ. ಸೇವಾಧಾರಿಯ ಕರ್ತವ್ಯವಾಗಿದೆ ಸದಾ ಸೇವೆಯಲ್ಲಿರುವುದು. ಮಾನಸಾ ಸೇವೆಯಾಗಲಿ, ವಾಚಾ ಸೇವೆಯಾಗಲಿ, ಕರ್ಮಣಾ ಸೇವೆಯಲ್ಲಿಯಾಗಲೀ, ಆದರೆ ಸೇವಾಧಾರಿ ಎಂದರೆ ನಿರಂತರ ಸೇವೆಯಲ್ಲಿ ತತ್ಪರರಾಗಿರುವವರು, ಅವರು ಎಂದಿಗೂ ಸೇವೆಯನ್ನು ತಮ್ಮಿಂದ ಬೇರೆ ಎಂದು ತಿಳಿಯುವುದಿಲ್ಲ, ನಿರಂತರ ಸೇವೆಯ ಕಡೆಗೆ ಗಮನವಿರುವುದು. ಇಂತಹವರನ್ನು ಸೇವಾಧಾರಿ ಎಂದು ಕರೆಯುತ್ತಾರೆ.** ಹಾಗಾದರೆ ತಮ್ಮನ್ನು ಸೇವಾಧಾರಿ ಎಂದು ತಿಳಿಯಿರಿ ಮತ್ತು ಸೇವಾಸ್ಥಾನ ಎಂದು ತಿಳಿದು ಇರಿ, ತ್ಯಾಗವೃತ್ತಿಯವರು ತಪಸ್ವಿಮೂರ್ತಿಯಾಗಿರಿ, ನಿರಂತರ ಸೇವೆಯ ತತ್ಪರತೆಯೇ ಬುದ್ಧಿಯಲ್ಲಿದ್ದಾಗ ಲೌಕಿಕ ಪ್ರವೃತ್ತಿ ಬದಲಾವಣೆಯಾಗಿ ಈಶ್ವರೀಯ ಪ್ರವೃತ್ತಿಯಾಗುವುದಿಲ್ಲವೇ? ಹಾಗಾದರೆ ಯಾವ ಗುಂಪೂ ತೋರಿಸದಂತಹ ಯಾವ ನವೀನತೆಯನ್ನು ಈ ಗುಂಪು ತೋರಿಸುವುದು? ಯಾವುದಾದರೂ ನವೀನತೆಯನ್ನು ತರಬೇಕು. ವಿಶೇಷ ಭಟ್ಟಿಗೋಸ್ಕರ ಬಂದಾಗ ತಮ್ಮಲ್ಲಿ ವಿಶೇಷ ಪರಿವರ್ತನೆಯನ್ನೂ ತಂದುಕೊಳ್ಳಬೇಕು. ನಡೆದಾಡುತ್ತಾ-ತಿರುಗಾಡುತ್ತಾ ವಿಶೇಷತೆಯನ್ನು ತಂದುಕೊಂಡು ತಮ್ಮ ಹೆಸರು ವಿಶೇಷ ಆತ್ಮರ ಪಟ್ಟಿಯಲ್ಲಿ ಜಮಾ ಮಾಡಿಕೊಂಡು ಹೋಗಬೇಕಾಗಿದೆ. ಬಾಪ್ ದಾದಾರವರ ಬಳಿ ಎಷ್ಟು ಪ್ರಕಾರದ ಲಿಸ್ಟ್ ಇದೆ ತಿಳಿದಿದೆಯೇ? ಅಥವಾ ಗೊತ್ತಿದೆಯೇ? ತಮ್ಮದು ಯಾವ ಲಿಸ್ಟಿನಲ್ಲಿ ಹೆಸರಿದೆ ಗೊತ್ತಿದೆಯೇ? ತಮ್ಮ ಹೆಸರು ವಿಶೇಷ ಆತ್ಮರಲ್ಲಿ ಇರುವಂತೆ ಪ್ರಯತ್ನ ಮಾಡಿ. ಯಾವುದೇ ವಿಶೇಷ ಕರ್ತವ್ಯವನ್ನು ಮಾಡಿದಾಗ, ವಿಶೇಷತೆಯನ್ನು ತೋರಿಸುತ್ತೀರಿ ಆಗ ವಿಶೇಷ ಆತ್ಮರಾಗುತ್ತೀರಿ. ಅಂದಾಗ ವಿಶೇಷ ಆತ್ಮರಾಗಿಯೇ ಹೋಗಬೇಕಾಗಿದೆ. ಮರುಜೀವ ಆಗಿದ್ದೀರೋ ಅಥವಾ ಆಗಲು ಬಂದಿದ್ದೀರೋ? ಮರುಜೀವ ಆಗಿ ಬ್ರಹ್ಮಾಕುಮಾರರಾಗಿದ್ದೀರೋ ಅಥವಾ ಈಗ ಆಗಬೇಕಾಗಿದೆಯೋ? ಯಾವಾಗ ಸತ್ತು ಜನ್ಮವನ್ನು ತೆಗೆದುಕೊಳ್ಳುತ್ತೀರೋ ಆಗ ಬ್ರಹ್ಮಾಕುಮಾರ ಎಂದು ಕರೆಸಿಕೊಂಡಿರಿ. ಸತ್ತು ಹೊಸ ಜನ್ಮವನ್ನು ತೆಗೆದುಕೊಳ್ಳಲು ಮರುಜೀವ ಎಂದು ಹೇಳುತ್ತೀರಲ್ಲವೇ. ಇಲ್ಲವೆಂದರೆ ಜನ್ಮವನ್ನು ತೆಗೆದುಕೊಳ್ಳುವ ಮೊದಲೇ ಬ್ರಹ್ಮಾಕುಮಾರರು ಹೇಗೆ ಆಗುತ್ತೀರಿ? ಮಕ್ಕಳು ಎಂದರೆ ಅಧಿಕಾರಿಗಳೇ ಆದರೆ ಸುಪುತ್ರರಾಗಿ ಉದಾಹರಣೆಯಾಗುವುದು ಉಳಿದಿದೆ. ಬ್ರಹ್ಮಾಕುಮಾರರಾದಿರಿ ಎಂದರೆ ಮರುಜೀವ ಆಗಿಬಿಟ್ಟಿದ್ದೀರಿ ಎಂಬ ಸ್ಮೃತಿಯಲ್ಲಿ ಇರುವುದರಿಂದ ಮತ್ತೆ ಈ ಶರೀರವೂ ಸಹ ತಮ್ಮದಾಗುವುದಿಲ್ಲ. ಈ ಶರೀರವನ್ನು ತಂದೆ ಈಶ್ವರೀಯ ಸೇವೆಗಾಗಿ ನೀಡಿದ್ದಾರೆ. ತಾವು ಸತ್ತುಹೋಗಿದ್ದೀರಲ್ಲವೇ ಆದರೆ ಈ ಹಳೆಯ ಶರೀರ ಕೇವಲ ಈಶ್ವರೀಯ ಸೇವೆಗಾಗಿ ಸಿಕ್ಕಿದೆ ಎಂದು ತಿಳಿದು ನಡೆಯುವುದರಿಂದ ಈ ಶರೀರವನ್ನೂ ಸಹ ಉಡುಗೊರೆ ಎಂದು ತಿಳಿಯುವಿರಿ. ಮತ್ತೆ ಈ ದೇಹದ ಮೇಲೆ ಮಮತ್ವವೂ ಸಹ ಸಮಾಪ್ತಿ ಆಗಿಬಿಡುತ್ತದೆ. ಹೇಗೆ ಟ್ರಸ್ಟಿ ಆಗಿರುವುದರಿಂದ ಇದು ಬಹುಮಾನವಾಗಿ ಸಿಕ್ಕಿರುವುದು ಎಂದು ತಿಳಿಯುವುದರಿಂದ ಮಮತ್ವ ಕಡಿಮೆ ಆಗುತ್ತದೆಯಲ್ಲವೇ. ಅದೇ ರೀತಿ ಈ ಶರೀರವೂ ಸಹ ಕೇವಲ ಈಶ್ವರೀಯ ಸೇವೆಗಾಗಿ ಬಾಡಿಗೆ ರೂಪದಲ್ಲಿ ಸಿಕ್ಕಿದೆ. ಯಾರ ವಸ್ತುವಿದೆ ಅವರ ಸ್ಮೃತಿ ಆ ವಸ್ತುವನ್ನು ನೋಡಿ ಬರುತ್ತದೆಯಲ್ಲವೇ. ಕೊಟ್ಟಂತಹ ವಸ್ತುವನ್ನು ನೋಡಿ ಕೊಟ್ಟಂತಹವರ ನೆನಪು ಬರುತ್ತದೆಯಲ್ಲವೇ. ಈ ಕೊಡುಗೆಯನ್ನು ಆತ್ಮೀಯ ತಂದೆ ನೀಡಿದ್ದಾರೆ, ಆತ್ಮೀಯ ತಂದೆಯ ನೆನಪು ಇರುತ್ತದೆ. ಕೊಡುಗೆ ಎಂದು ತಿಳಿಯುವುದರಿಂದ ಆತ್ಮೀಯತೆ ಇರುತ್ತದೆ

ಮತ್ತು ಆತ್ಮೀಯತೆಯಿಂದ ಸದಾ ಕಾಲ ಬುದ್ಧಿಗೆ ವಿಶ್ರಾಂತಿ ಇರುತ್ತದೆ. ಆಯಾಸವಾಗುವುದಿಲ್ಲ. ಕೊಡುಗೆಯನ್ನು ನನ್ನದು ಎಂದು ತಿಳಿಯುವುದರಿಂದ ಆತ್ಮೀಯತೆಗೆ ಬದಲಾಗಿ ಗೊಂದಲವಾಗುತ್ತದೆ. ವಿಶ್ರಾಂತಿಗೆ ಬದಲಾಗಿ ಗಾಬರಿ ಆಗುತ್ತದೆ. ಆದ್ದರಿಂದ ಈ ಶರೀರವಿರುವುದೇ ಕೇವಲ ಈಶ್ವರೀಯ ಸೇವೆಗಾಗಿ, ಕೊಡುಗೆ ಎಂದು ತಿಳಿಯುವುದರಿಂದ ಸ್ವತಃವಾಗಿಯೇ ಆತ್ಮೀಯ ಸ್ಥಿತಿ ಇರುತ್ತದೆ. ಇದು ಸಹಜ ಉಪಾಯ ಆಗಿದೆಯಲ್ಲವೇ. ಈಗ ನಿರಂತರ ಸಹಜಯೋಗಿ ಆಗಲು ಸಾಧ್ಯವಾಗಿದೆಯಲ್ಲವೇ. ನಿರಂತರ ಆತ್ಮೀಯತೆಯ ಸ್ಥಿತಿಯಲ್ಲಿ ಸ್ಥಿತರಾಗಿರಿ. ಈ ನವೀನತೆಯನ್ನು ತೋರಿಸಬೇಕು. ತಮ್ಮನ್ನು ನೋಡಿ ಇವರು ಉದಾಹರಣೆ ಆಗಿ ಬಂದಿದ್ದಾರೆ ಎಂದು ಎಲ್ಲರೂ ಅನುಭವ ಮಾಡಲಿ. ಅನ್ಯರಿಗೂ ಸಹ ನೆನಪಿನ ಯಾತ್ರೆಯನ್ನು ಸಹಜ ಮಾಡಿಸಲು ಸ್ಯಾಂಪಲ್ ಆಗಿ ಹೋಗಿ, ಈ ಗುಂಪ್ ಸ್ಯಾಂಪಲ್ ಆಗಿ ಹೋಗುತ್ತೀರಲ್ಲವೇ.

ಒಂದುವೇಳೆ ಒಂದೊಂದು ಸ್ಥಾನಕ್ಕೆ ಒಂದು ಉದಾಹರಣೆ ಆಗುತ್ತೀರೆಂದರೆ ಇದು ಸರಳ ಮಾತಾಗುತ್ತದೆಯಲ್ಲವೇ. ತಮ್ಮ ಹೆಸರು ಏನು ಇಟ್ಟುಕೊಳ್ಳುತ್ತೀರಿ? ಸೇವಾಧಾರಿ, ಸೇವಾಧಾರಿಯಂತೂ ಆಗಿಯೇ ಇದ್ದೀರಿ ಆದರೆ ಇಂತಹ ಸೇವೆಯನ್ನು ಮಾಡಿ. ಆದರೆ ಸೇವೆಯನ್ನು ಮಾಡಬೇಕಾದರೆ ಪ್ರತ್ಯಕ್ಷ ಫಲವನ್ನು ಪ್ರಾಪ್ತಿ ಮಾಡಿಕೊಂಡಿರಬೇಕು. ಯಾವ ಸ್ಲೋಗನನ್ನು ನೆನಪಿಟ್ಟುಕೊಳ್ಳುತ್ತೀರಿ? ತಮ್ಮ ಆತ್ಮೀಯತೆಯ ಸ್ಥಿತಿ ಪ್ರತ್ಯಕ್ಷ ಮಾಡಿ ಪ್ರತಿಯೊಬ್ಬ ಆತ್ಮನಿಗೆ ಪ್ರತ್ಯಕ್ಷಫಲ ಕೊಡಿಸುವಂತಹವರು. ಇದು ಈ ಗುಂಪಿನ ಕರ್ತವ್ಯವಾಗಿದೆ. ಎಷ್ಟು ತಮ್ಮ ಆತ್ಮೀಯ ಸ್ಥಿತಿಯನ್ನು ಪಕ್ಕಾ ಮಾಡಿಕೊಳ್ಳುತ್ತೀರೋ ಅಷ್ಟು ಪ್ರತ್ಯಕ್ಷಫಲ ನೀಡಲು ಸಾಧ್ಯವಾಗುತ್ತದೆ. ಒಂದುವೇಳೆ ಆತ್ಮೀಯತೆಯ ಸ್ಥಿತಿಯನ್ನು ಪ್ರತ್ಯಕ್ಷ ತೋರಿಸಲಿಲ್ಲವೆಂದರೆ ಫಲವೂ ಸಹ ಪ್ರತ್ಯಕ್ಷವಾಗಿ ಕಾಣುವುದಿಲ್ಲ. ಪ್ರತ್ಯಕ್ಷಫಲ ತೋರಿಸಲು ತಮ್ಮ ಆತ್ಮೀಯ ಸ್ಥಿತಿಯನ್ನು ಪ್ರತ್ಯಕ್ಷ ಮಾಡಿ, ಸ್ಲೋಗನ್ ಯಾವುದು ಎಂದು ತಿಳಿಯಿತೇ. ಒಳ್ಳೆಯದು - ತಮ್ಮ ಮೇಲೆ ಯಾವ ಮುದ್ರೆಯನ್ನು ಹಾಕಿಕೊಂಡಿದ್ದೀರಿ? ಸೇವಾಧಾರಿ, ಮನಸ್ಸಿನಿಂದಲೂ ಸಹ ಸೇವೆ ಮಾಡುವುದು ತಿಳಿಯಿತೇ? ಈ ಗುಂಪು ಮುಖ್ಯವಾಗಿ ಯಾವ ತ್ಯಾಗವನ್ನು ಮಾಡುತ್ತದೆ? ಈ ತ್ಯಾಗದಿಂದ ತಪಸ್ವಿ ಆಗಲು ಸಾಧ್ಯವಾಗುತ್ತದೆ? ತಮ್ಮ ಪ್ರ್ಯಾಕ್ಟಿಕಲ್ ದಿನಚರಿಯಲ್ಲಿ ಹೆಚ್ಚಿನದಾಗಿ ಯಾವುದು ವಿಘ್ನ ರೂಪವಾಗುತ್ತದೆ? ಒಂದೇ ಶಬ್ದದಲ್ಲಿ ಅದನ್ನು ಆವೇಶವೆಂದು ಹೇಳಲಾಗುತ್ತದೆ. ಅದಕ್ಕಾಗಿ ಆತ್ಮೀಯತೆ ಬರುವುದಿಲ್ಲ, ಪ್ರವೃತ್ತಿಯಲ್ಲಿ ಯಾರು ನಾನು ರಚಯಿತನಾಗಿದ್ದೇನೆ ಎಂಬ ದರ್ಪವನ್ನಿಡುತ್ತಾರೋ ಅಥವಾ ವ್ಯವಹಾರದಲ್ಲಿಯೂ ಸಹ ದರ್ಪವಿರುತ್ತದೆ, ಸಂಬಂಧದಲ್ಲಿಯೂ ಸಹ ಇದೇ ಮುಖ್ಯ ವಿಘ್ನವಾಗುತ್ತದೆ, ಇದರ ತ್ಯಾಗವನ್ನು ಮಾಡಬೇಕು. ಸೇವಾಧಾರಿಗಳು ದರ್ಪವನ್ನು ತೋರಿಸುವುದಿಲ್ಲ. ಆದರೆ ಅದಕ್ಕಾಗಿ ದರ್ಪವನ್ನು ತ್ಯಾಗ ಮಾಡಬೇಕು. ಇದು ಮುಖ್ಯ ತ್ಯಾಗ ಆಗಿದೆ. ತ್ಯಾಗ ಮಾಡುವ ಸಾಹಸವಿದೆಯಲ್ಲವೇ. ಯಾವುದೇ ಪ್ರತಿಜ್ಞೆಯನ್ನು ಮಾಡುತ್ತೀರೆಂದರೆ ಒಂದೊಂದು ಪ್ರತಿಜ್ಞೆಯ ಮೇಲೆ ಅವಿನಾಶಿಯಾದ ಮುದ್ರೆಯನ್ನು ಹಾಕಿಬಿಡಿ. ಅವಿನಾಶಿಯಾದ ಮುದ್ರೆಯನ್ನು ಹಾಕದೆ ಇರುವ ಕಾರಣ ಪ್ರತಿಜ್ಞೆ ಅಲ್ಪಕಾಲದ್ದಾಗಿಬಿಡುತ್ತದೆ. ಕೆಲವರ ಫಲಿತಾಂಶದಲ್ಲಿಈ ರೀತಿ ಕಂಡುಬರುತ್ತದೆ - ಇಲ್ಲಿ ಪ್ರತಿಜ್ಞೆಯನ್ನು ಮಾಡಿ ಹೋಗುತ್ತಾರೆ ನಂತರ ಪ್ರತಿಜ್ಞೆಗೆ ಬದಲಾಗಿ ವಿಲಾಪ ಮಾಡುವವರಾಗಿಬಿಡುತ್ತಾರೆ. ಏನು ಮಾಡಲಿ, ಹೇಗೆ ಮಾಡಲಿ! ತಾವು ಸಹಯೋಗ ಕೊಡಿ. ಇಷ್ಟವಿಲ್ಲವೆಂದರೂ ಈ ಕಾರಣದಿಂದ ಈ ರೀತಿ ಆಯಿತು.ಹೀಗೆ ಯೋಗಿಯ ಬದಲಾಗಿ ವಿಯೋಗಿಯಾಗಿ ರೋದಿಸುತ್ತಾರೆ(ವಿಲಾಪ). ಅಂದಾಗ ಈಗ ನಿರಂತರ ಯೋಗಿಗಳಾಗ ಬೇಕು. ರೋದಿಸುವಂತಹ ವಿಯೋಗಿಗಳಾಗಬಾರದು. ಈ ಗುಂಪು ಇದನ್ನು ಪ್ರತ್ಯಕ್ಷವಾಗಿ ಮಾಡಿ ತೋರಿಸಲಿ, ಏನನ್ನು ಹೇಳಲಾಗಿದೆಯೋ ಅದನ್ನೇ ಮಾಡಲಿ, ಎಷ್ಟೇ ಮಾತನ್ನು ಸಹನೆ ಮಾಡಬೇಕಾಗಿ ಬರಲಿ ಆದರೆ ಎದುರಿಸಿ ತೋರಿಸುತ್ತೇವೆ, ವಿಜಯಿ ಆಗಿಯೇ ತೋರಿಸುತ್ತೇವೆ, ಸಹಾಯಕಾರಿಗಳಾಗುತ್ತೇವೆ, ಶುಭ ಚಿಂತಕರಾಗುತ್ತೇವೆ ಎಂಬ ಪ್ರತಿಜ್ಞೆಯನ್ನು ಮಾಡಿರಿ. ಒಬ್ಬರಿಗೊಬ್ಬರು ಸಹಯೋಗಿಗಳಾಗಿ ಶುಭ ಚಿಂತಕರಾಗಿರುತ್ತೀರೆಂದರೆ ಸಹಯೋಗಿ ಆಗಿ ಏನು ತಾನೇ ಮಾಡಲು ಸಾಧ್ಯವಿಲ್ಲ! ಯಾವಾಗ ಒಬ್ಬರಿಗೊಬ್ಬರು ಸಹಯೋಗಿಗಳಾಗಿ ಮುತ್ತಿಗೆ ಹಾಕುತ್ತೀರಿ ಅಂದಾಗ ಮಾಯೆಗೂ ಸಹ ಮುತ್ತಿಗೆ ಹಾಕಲು ಸಾಧ್ಯವಿಲ್ಲವೇ. ಪಾಂಡವ ಸೇನೆ ಮುತ್ತಿಗೆ ಹಾಕಲು ಸಾಧ್ಯವಿಲ್ಲವೇ? ಒಬ್ಬರಿಗೊಬ್ಬರು ಶುಭಚಿಂತಕರಾಗಿ ಸಹಯೋಗಿ ಆಗುತ್ತೀರೆಂದರೆ ಮಾಯೆಗೆ ನಿಮ್ಮ ಮೇಲೆ ಮುತ್ತಿಗೆ ಹಾಕುವ ಸಾಹಸವಿಲ್ಲ. ಇದು

ಸಹಯೋಗದ ಶಕ್ತಿಯಾಗಿದೆ. ಇದು ಸಂಘಟನೆ ಸಹಯೋಗ ಶಕ್ತಿಯದಾಗಿದೆ. ಈ ಸಂಘಟನೆ ಸಹಯೋಗಶಕ್ತಿಯ ಪ್ರತ್ಯಕ್ಷರೂಪವನ್ನು ತೋರಿಸಬೇಕು. ಒಳ್ಳೆಯದು.

ಅವ್ಯಕ್ತ ಮುರಳಿ 19-07-1971.

***ಸಿಂಪಲ್ (ಸರಳವಾಗಿ) ಮತ್ತು ಸ್ಯಾಂಪಲ್(ಉದಾಹರಣೆಯಾಗಿ) ಆಗಿರಿ.***

ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನು ಆತ್ಮ ಆನಂದ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಪ್ರತಿಯೊಂದು ಸಂಘಟನೆಯನ್ನು ಪ್ರತ್ಯಕ್ಷ ಕರ್ತವ್ಯವಾಗಿ ಭಾವಿಸಿ, ಎಲ್ಲಾ ವಿಷಯಗಳಲ್ಲಿ ಸರಳವಾಗಿರುತ್ತಾ ಎಲ್ಲರಿಗೂ ಸರಳ ಮತ್ತು ಉದಾಹರಣೆಯಾಗಿ ಪ್ರತಿಯೊಂದು ಕರ್ಮವನ್ನು ಮಾಡುವ ಸುಪುತ್ರನು ಮತ್ತು ಉದಾಹರಣಾ ಮೂರ್ತಿ.

2. ನಾನು ತಂದೆಯ ಸಮಾನ, ಸರಳ ಮತ್ತು ಸ್ವಚ್ಛವಾಗಿರುತ್ತಾ ಎಲ್ಲರಿಗೂ ಉದಾಹರಣೆಯಾಗಿ ಮಹಾನತೆಯನ್ನು ಪ್ರಸಿದ್ಧ ಮಾಡಿದ್ದೇನೆ.

3. ಬೇಹದ್ ತಂದೆಯ ಮಗುವಾದ ನಾನು ಬೇಹದ್ ಪಾತ್ರವನ್ನು ಅಭಿನಯಿಸಿ, ವಿಶ್ವಕ್ಕೆ ನಿಮಿತ್ತವಾಗಿ ಎಲ್ಲರನ್ನೂ ಆಕರ್ಷಿಸಿದ್ದೇನೆ.

4. ನಾನು ಸರಳವಾಗಿ ಇರುತ್ತಾ, ಶುಭ ಭಾವನೆಯಿಂದ ಸರ್ವರಿಗೆ ಸಹಯೋಗವನ್ನು ಕೊಟ್ಟಿದ್ದೇನೆ

ಮತ್ತು ಸರ್ವರಿಂದ ಸಹಯೋಗವನ್ನು ಪಡೆದಿದ್ದೇನೆ.

5. ನಾನು ಈಶ್ವರೀಯ ಸೇವಾಧಾರಿಯಾಗಿ ಸೇವೆ ಮಾಡುವ ದಾತ, ವರದಾತನ ಮಗುವಾಗಿದ್ದೇನೆ.

6. ನಾನು ಲೌಕಿಕ ಪ್ರವೃತ್ತಿಯನ್ನು ಈಶ್ವರೀಯ ಪ್ರವೃತ್ತಿಯಲ್ಲಿ ಪರಿವರ್ತನೆ ಮಾಡಿ, ಅಲೌಕಿಕ ಸ್ಥಿತಿಯಲ್ಲಿ ಏಕರಸವಾಗಿ ಇದ್ದೇನೆ.

7. ನಾನು ಮನಸಾ, ವಾಚಾ, ಕರ್ಮಣಾ ನಿರಂತರ ಸೇವೆಯಲ್ಲಿ ತತ್ಪರವಾಗಿರುವ ಈಶ್ವರೀಯ ಸೇವಾಧಾರಿಯಾಗಿದ್ದೇನೆ.

8. ನಾನು ಸ್ವಯಂ ಅನ್ನು ಸೇವಾಧಾರಿಯಾಗಿ ಮತ್ತು ಮನೆಯನ್ನೂ ಸೇವಾ ಸ್ಥಾನವಾಗಿ ಮಾಡಿಕೊಂಡು ತ್ಯಾಗವೃತ್ತಿಯಲ್ಲಿರುವ ತಪಸ್ವಿ ಮೂರ್ತಿ.

9. ನಾನು ಬುದ್ಧಿಯಲ್ಲಿ ನಿರಂತರ ಸೇವೆಯ ಸಂಲಗ್ನತೆಯಿಂದ ಲೌಕಿಕ ಪ್ರವೃತ್ತಿಯನ್ನು ಈಶ್ವರೀಯ ಪ್ರವೃತ್ತಿಯಲ್ಲಿ ಪರಿವರ್ತನೆ ಮಾಡಿಕೊಂಡಿದ್ದೇನೆ.

10. ನಾನು ವಿಶೇಷ ಕಾರ್ಯವನ್ನು ಮಾಡುವ ವಿಶೇಷ ಆತ್ಮ.

11. ನಾನು ಈಶ್ವರೀಯ ಸೇವೆಗಾಗಿ ಈ ಶರೀರವನ್ನು ಬಾಡಿಗೆ ವಸ್ತುವಾಗಿ ಭಾವಿಸಿ ಸ್ವತಹವಾಗಿ ನಿರಂತರ ಆತ್ಮೀಯತೆಯ ಸ್ಥಿತಿಯಲ್ಲಿರುವ ಸಹಜ ಯೋಗಿ.

12. ನಾನು ಆತ್ಮೀಯತೆಯ ಸ್ಥಿತಿಯನ್ನು ಪ್ರತ್ಯಕ್ಷ ಮಾಡಿ ಪ್ರತಿ ಆತ್ಮನಿಗೆ ಪ್ರತ್ಯಕ್ಷ ಫಲವನ್ನು ಕೊಡಿಸುವ ಪ್ರತ್ಯಕ್ಷ ಫಲಸ್ವರೂಪ.

13. ಆತ್ಮೀಯತೆಯಿಂದ ದರ್ಪವನ್ನು ತ್ಯಾಗ ಮಾಡಿ ತಂದೆಯೊಂದಿಗೆ ಮಾಡಿರುವ ಪ್ರತಿಜ್ಞೆಯ ಮೇಲೆ ಅವಿನಾಶಿ ಮುದ್ರೆಯನ್ನು ಹಾಕಿಕೊಂಡಿರುವ ನಿರಂತರ ಯೋಗಿ.

14. ನಾನು ಶುಭ ಚಿಂತಕನಾಗಿ ಸಂಘಟನೆಯ ಸಹಯೋಗ ಶಕ್ತಿಯಿಂದ ಮಾಯೆಯನ್ನು ಸಮಾಪ್ತಿ ಮಾಡಿದ್ದೇನೆ.